Seshadripuram Educational Trust

# Vani

**The Voice of Excellence**

ಶೈಕ್ಷಣಿಕ, ಸಾಂಸ್ಕೃತಿಕ, ತ್ರೈಮಾಸಿಕ ಪತ್ರಿಕೆ

Volume - 33
Edition - 3
Jan - 2020



Seshadripuram Educational Trust
SINCE 1930
INSTITUTIONS

ಶೇಷಾದ್ರಿಪುರಂ ಶಿಕ್ಷಣ ದತ್ತಿ
ಶೇಷಾದ್ರಿಪುರಂ, ಬೆಂಗಳೂರು-560020
www.set.edu.in | info@set.edu





'ಯುವ ಸೌರಭ' 11




AYRA 2K19 8



ಕನ್ನಡ ರಾಜ್ಯೋತ್ಸವ 6



Sports Meet 2019-20 5



Children's Day 2019 5

**For Internal Circulation only**

Book-Post

To,

______________________

______________________

______________________

______________________


If undelivered, please return it to:
Editor, 'Vani' Quaterly Newsletter
Seshadripuram Educational Trust,
No.27, Nagappa Street,
Seshadripuram, Bengaluru - 560020

**ವ್ಯವಸ್ಥಾಪಕ ಸಂಪಾದಕರು**
ಎನ್.ಆರ್. ಪಂಡಿತಾರಾಧ್ಯ

**ಪ್ರಧಾನ ಸಂಪಾದಕರು**
ಡಾ. ವೂಡೇ ಪಿ. ಕೃಷ್ಣ

**ಸೃಜನಾತ್ಮಕ ಸಲಹೆ**
ನಳಿನಿ ಹರೀಶ್

**ಸಂಪಾದಕರು**
ತೇಜಸ್ವಿನಿ ಪಿ.
ಡಾ. ಕಾವ್ಯಶ್ರೀ ಎಚ್.
ಶಾಂತಮ್ಮ

**ಸಂಪಾದಕ ಮಂಡಳಿ**

ಎಸ್. ಶೇಷ ನಾರಾಯಣ
ಡಬ್ಲ್ಯೂ.ಜಿ. ರಾಮಕೃಷ್ಣ
ಬಿ.ಎಸ್. ಲೋಕನಾಥ್
ಪಿ.ಸಿ. ನಾರಾಯಣ
ಎಮ್.ಎಸ್. ನಟರಾಜ್
ಡಾ. ಜಿ. ವತ್ಸಲ
ಡಾ. ಭಾರ್ಗವಿ ವಿ.ಆರ್.
ಡಾ. ಮೀರಾ ಹೆಚ್. ಎನ್.
ಡಾ. ಪ್ರಣೀತ ಬಿ.ಎಸ್.
ಡಾ. ಎಸ್.ಎನ್. ವೆಂಕಟೇಶ್
ಪ್ರೊ. ಜಯರಾಮ್
ಪ್ರೊ. ವಿ. ಸುಮತಿ
ಪ್ರೊ. ಎನ್.ಎಸ್. ಸತೀಶ್
ಪ್ರೊ. ಸೌಮ್ಯ ಈರಪ್ಪ ಕೆ.
ಪ್ರೊ. ಜಗದೀಶ್ ಜಿ.ಟಿ.
ಪ್ರೊ. ವಿದ್ಯಾ ಶಿವಣ್ಣವರ್
ಪ್ರೊ. ಪಿ. ನಾರಾಯಣ ಸ್ವಾಮಿ
ಪ್ರೊ. ಜಿ.ಕೆ. ಮಂಜುನಾಥ್
ಪ್ರೊ. ಆರ್. ಮಹಾಲಕ್ಷ್ಮಿ
ಡಾ. ಆರ್. ಮಂಜುನಾಥ್
ಪ್ರೊ. ಟಿ. ದೊಡ್ಡೇಗೌಡ
ಪ್ರೊ. ಅರ್ಚನ ಸ್ವಾಮಿ ಎನ್.
ಪ್ರೊ. ಬಸವರಾಜು ಬಿ.ಬಿ.
ಏಕಾಂಬರೇಶ್ವರ
ನೇತ್ರಾಮಣಿ ವಿ.
ಗೀತಾ ಎಂ.
ಕೆ. ಕವಿತಾ
ಪರಿಮಳ ಎಲ್.ಕೆ.
ಎಚ್.ಎನ್. ನಂದ

# ಸಂಪಾದಕೀಯ

ಒಬ್ಬ ವ್ಯಕ್ತಿಯು ಒಂದು ಹೊಸ ಹಳ್ಳಿಯಲ್ಲಿ ವಾಸಮಾಡಬೇಕಾದ ಸಂದರ್ಭ ಎದುರಾಯಿತು. ಅವನಿಗೆ ಆ ಹೊಸ ಊರು ಹೇಗೋ? ಏನೋ? ಅಲ್ಲಿನ ಜನ ತನಗೆ ಇಷ್ಟವಾಗುವರೋ, ಇಲ್ಲವೋ? ಎಂಬ ಚಿಂತೆ ಶುರುವಾಯಿತು. ಅಲ್ಲಿಯೇ ಇದ್ದ ಸಂತನೊಬ್ಬನ ಬಳಿ ಹೋಗಿ, "ಈ ಹಳ್ಳಿ ನನಗೆ ಇಷ್ಟವಾಗುವುದೇ? ಇಲ್ಲಿಯ ಜನರು ಒಳ್ಳೆಯವರೇ? ದಯವಿಟ್ಟು ತಿಳಿಸಿ", ಎಂದು ಕೇಳುತ್ತಾನೆ. ಪ್ರತಿಯಾಗಿ ಸಂತ ಆ ವ್ಯಕ್ತಿಯನ್ನೇ ಮರುಪ್ರಶ್ನಿಸುತ್ತಾನೆ, "ನೀವು ಬಂದ ಊರಿನ ಜನರು ಹೇಗಿದ್ದರು?" ಎಂದು, ಆ ವ್ಯಕ್ತಿ ಹೇಳುತ್ತಾನೆ – "ಅವರು ನೀಚರು, ದುರಾಸೆಯುಳ್ಳವರಾಗಿದ್ದು, ಬಹಳ ಕೋಪಿಷ್ಠರು ಮತ್ತು ಮೋಸ, ಕಳ್ಳತನದಿಂದಲೇ ಜೀವಿಸುತ್ತಿದ್ದರು", ಅದಕ್ಕೆ ಸಂತ "ಈ ಹಳ್ಳಿಯವರೂ ಅಂಥವರೇ ಆಗಿದ್ದಾರೆ" ಎಂದು ಉತ್ತರಿಸುತ್ತಾನೆ.

ಆ ಹಳ್ಳಿಗೆ ಬಂದ ಮತ್ತೊಬ್ಬ ಹೊಸಬನು ಸಂತನನ್ನು ಭೇಟಿ ಮಾಡಿ ಅದೇ ರೀತಿ ವಿಚಾರಿಸುತ್ತಾನೆ, ಸಂತನೂ ಹಿಂದಿನಂತೆಯೇ: "ನೀವು ಬಂದ ಊರಿನ ಜನ ಹೇಗಿದ್ದರು?" ಎನ್ನುತ್ತಾನೆ, ಅದಕ್ಕೆ ಆ ಹೊಸಬ "ಅವರು ಬಹಳ ಒಳ್ಳೆಯವರಾಗಿದ್ದು ಸಾಮರಸ್ಯದಿಂದ ಬದುಕುತ್ತಿದ್ದರು, ಒಬ್ಬರಿಗೊಬ್ಬರು ಕಾಳಜಿ, ಗೌರವ ಹೊಂದಿದ್ದರು ಮತ್ತು ತಮ್ಮ ನಾಡನ್ನು ಕಾಪಾಡಿಕೊಳ್ಳುವವರಾಗಿದ್ದರು ಹಾಗೂ ಎಲ್ಲೆಲ್ಲಿಯೂ ಚೈತನ್ಯವನ್ನು ಹುಡುಕುವಂಥವರು" ಎನ್ನುತ್ತಾನೆ. ಆಗ ಆ ಸಂತ "ಈ ಹಳ್ಳಿಯವರೂ ಅದೇ ಪ್ರಕಾರದವರಾಗಿದ್ದಾರೆ" ಎಂದು ಹೇಳುತ್ತಾನೆ. (ಜೆನ್ ಕಥಾಸಂಗ್ರಹದಿಂದ)

ಸಮಯ, ಸಂದರ್ಭ, ಸನ್ನಿವೇಶಗಳು ನಮ್ಮನ್ನು ನಿಯಂತ್ರಿಸುವುದಕ್ಕಿಂತ ಹೆಚ್ಚಾಗಿ ನಮ್ಮ ಮನೋಭಾವವೇ ನಮ್ಮ ಪರಿಸರವನ್ನು ರೂಪಿಸುತ್ತಿರುತ್ತದೆ. ಕಾಲ ಎಷ್ಟೇ ವಿಷಮವಾಗಿದ್ದರೂ, ಉತ್ತಮವಾದ ಮನಸ್ಥಿತಿಯಿಂದ ಮಾತ್ರ ಉತ್ತಮ ಸಮಾಜದ ನಿರ್ಮಾಣ ಸಾಧ್ಯವಾಗುತ್ತದೆ.

2020 ಸುಖ, ಶಾಂತಿ ಮತ್ತು ನೆಮ್ಮದಿಗಳಿಂದ ಕೂಡಿರಲಿ ಎಂಬ ಆಶಯದೊಂದಿಗೆ, ಹೊಸ ವರುಷದ ಹಾರ್ದಿಕ ಶುಭಕಾಮನೆಗಳು!

**ಸಂಪಾದಕರು**
editorialvani@gmail.com

For suggestions & feedback mail us at : editorialvani@gmail.com

# In the Media


ಪ್ರಜಾವಾಣಿ
ಬುಧವಾರ • ಡಿಸೆಂಬರ್ 18, 2019
ಬಳ್ಳಾರಿ 3B
ಒನಕೆ ಓಬವ್ವ ಅಧ್ಯಯನ ಪೀಠ: ವಿಚಾರ ಸಂಕಿರಣ
'ಮಹಿಳೆಯರು ಪುರುಷರಷ್ಟೇ ಸಮರ್ಥರು'


ಸಂಯುಕ್ತ ಕರ್ನಾಟಕ
Fri, 25 October 2019
ಮಹಾತ್ಮಗಾಂಧಿ ವಿಶ್ವಕ್ಕೆ ಮಾದರಿ


ಉದಯವಾಣಿ
ಬುಧವಾರ, ಅಕ್ಟೋಬರ್ 16, 2019
ಎಲ್ಲಾ ಭಾಷೆ ಸಾಹಿತ್ಯ ಕನ್ನಡದಲ್ಲಿ ಸಿಗಲಿ
'ನಿನ್ನ ಪ್ರೀತಿಯ ಹಿಂದೆ' ಕೃತಿ ಲೋಕಾರ್ಪಣೆ ವೇಳೆ ಡಾ.ವೂಡೇ ಪಿ.ಕೃಷ್ಣ ಅಭಿಪ್ರಾಯ


ತ್ಯಾಗದಲ್ಲಿ ಮಹಿಳೆಯನ್ನು ಮೀರಿಸುವವರಿಲ್ಲ


ಸಂಯುಕ್ತ ಕರ್ನಾಟಕ


పురుషులకు దీటుగా మహిళల పాలన

"Cheers to a new year and another chance for us to get it right." - Oprah Winfrey

# Congratulations



## Mr. Gurumurthy Bhat P R.

Mr. Gurumurthy Bhat P R., Asst. Prof. in Commerce from Seshadripuram Degree College, Mysuru, has been qualified to be a Category Two Referee from the Indian Weightlifting Federation.

## Mr. Raghavendra R.



Mr. Raghavendra R., Physical Education Director, Seshadripuram Degree College, Mysuru has attained a Doctorate from Karpagam Academy of Higher Education, Coimbatore in the field of Physical Education.



## ಡಾ. ಕಾವ್ಯಶ್ರೀ ಎಚ್.

ಶೇಷಾದ್ರಿಪುರಂ ಪದವಿಪೂರ್ವ ಕಾಲೇಜಿನ ಕನ್ನಡ ಉಪನ್ಯಾಸಕಿ ಡಾ. ಕಾವ್ಯಶ್ರೀ ಎಚ್., ಅನುವಾದ ಮಾಡಿರುವ 'ಫೆಮಿನಿಸ್ಟ್ ಮ್ಯಾನಿಫೆಸ್ಟೋ' ಪುಸ್ತಕವು ವಿಜಯ ಕರ್ನಾಟಕ ದಿನಪತ್ರಿಕೆಯ '2019ರಲ್ಲಿ ಗಮನ ಸೆಳೆದ 19 ಪುಸ್ತಕಗಳ ಪಟ್ಟಿ'ಯಲ್ಲಿ ಸ್ಥಾನ ಪಡೆದಿದೆ. ಮತ್ತು ನವಕರ್ನಾಟಕ ಪ್ರಕಾಶನದ 'ಹೊಸತು' ಮಾಸಪತ್ರಿಕೆಯು 2018-19ರ ಸಾಲಿನಲ್ಲಿ ಪ್ರಕಟವಾದ ಮಹಿಳೆಯರಿಗೆ ಸಂಬಂಧಿಸಿದ ಅತ್ಯುತ್ತಮ ಲೇಖನಕ್ಕೆ ನೀಡುವ ಬಹುಮಾನ ಸಂದಿದೆ.




# Achievements




On 12th and 13th of September 2019, Seshadripuram Law College students bagged the 2nd Runners Up Trophy in Men's Basketball Tournament organised by Karnataka State Law University, at B.M.S. College of Law, Bengaluru.



Ms. Kruti Ashok Kumar and Ms.Harshita R., students of Seshadripuram First Grade College, Yelahanka, have created a Guinness World Record Title by participating in the largest Bharatha Natyam Dance event consisting of 7,190 participants at Sri Shivakama Sundari Sametha Sri Anantha Nataraja Moorthi Temple, Chidambaram, India on 3rd March, 2019.



## Vijaya

Vijaya of Seshadripuram Academy of Business Studies, Kengeri has won the Bronze Medal in the World Throwball Tournament, Independent Championship, Malaysia.

## Bhupinder Singh



Bhupinder Singh of Seshadripuram Academy of Business Studies, Kengeri participated in the prestigious All India AITA National Ranking Tennis Tournament held at Jalandhar, Punjab. His present rank is 308.

## Seshadripuram PU College

### Sports Achievements

| | | |
|---|---|---|
| **Siva Prasad .V** | International Level Taekwondo Championship | 01 Gold<br>01 Silver |
| **Gouthami P** | State Level Junior Athletics Championship ( Walking Race) | 01 Gold |
| **Harish S** | State Junior Taekwondo Championship | 01 Gold<br>01 Bronze |
| **Suhas K Kamath** | District Level in Athletics(Cross Country) | 05 Position |
| **Sharavan kumar** | District Level in Yoga | 01 Gold |
| **Sahana R Puranik** | District Level in Karate | 01Gold |
| **Harsh Deep Sinha** | District Level in Karate | 01Gold |
| **Revanth M** | State Level Throw Ball Dasara Meet 2019 | 01 Gold |
| **Rahul Rao S** | International Challenge Youth Cricket Tournament 2019 | Bronze |
| **Vaishnavi N R** | National level Air Rifle Shooting Independence Cup | 04 Gold<br>01 Silver<br>01 bronze |

## Seshadripuram College

### Seshadripuram



20 Students Participated in Throwball, Weightlifting, Netball, Wrestling and Handball and secured 2 gold medals 3 silver medals 5 bronze medals in various games

"ನಾನು ಕನ್ನಡಿಗನು, ಕರ್ನಾಟಕವು ನನ್ನದು ಎಂಬ ಸದ್ವಿಚಾರ ತರಂಗಗಳಿಂದ ಯಾವನ ಹೃದಯವು ಆತ್ಮಾನಂದದಿಂದ ಪುಳಕಿತಗೊಳ್ಳುವುದಿಲ್ಲವೋ ಕನ್ನಡ ತಾಯಿಗೆ ಈಗ ಬಂದೊದಗಿರುವ ವಿಷಮ ಸ್ಥಿತಿಯಲ್ಲಿ ಯಾವಾತನ ಹೃದಯವು ತಲ್ಲಣಿಸುವುದಿಲ್ಲವೋ ಅದು ಹೃದಯವಲ್ಲ, ಕಲ್ಲಿನ ಬಂಡೆ; ದೇಹವಲ್ಲ, ಮೋಟು ಮರ." – ಆಲೂರು ವೆಂಕಟರಾಯರು.

# Events

## Seshadripuram Institute of Management Studies
Yelahanka

### One-Day Faculty Orientation on, "Business Statistics"



On 13 Sept. 2019, S.I.M.S. held a One-Day Faculty Orientation on, "Business Statistics". The Resource persons on this occasion were Prof. Madhavan S Varadachari, Quality Management Consultant, he piloted the first technical session on Inferential Statistics. Dr N. Jaysankaran, Advisor, N.M.I.M.S. University and Former Vice-Chancellor conducted the second technical session where he gave a detailed account of how the faculty can go about teaching the students Descriptive Statistics. The final session was handled by Dr B. C. Prabhudev, Principal, G.R.V. Business Management Academy and Resource Person, C.B.S.M.S. He briefed students about the modules and concepts along with the gist of practical activities that can be implemented in the class to provide more clarity on the subject.

### Guest Lecture on, "Change Management"



On 15 Sept. 2019, S.I.M.S., organised a Guest Lecture on "Change Management". Resource Person was Mr Santosh, General Manager, O.R.B. Energy Pvt. Ltd.

### Industrial Visit to Karnataka Milk Federation



On 27 Sept. 2019, S.I.M.S. took its students on an industrial visit to K.M.F. Mr Narendra, Operations Head, K.M.F., briefed students about the industry and guided them around the factory.

### Visit to Miracle Orphanage




On I Oct. 2019, the students of Seshadripuram Institute of Management Studies under the Student Social Responsibility banner of 'Punyashala' visited Miracle Manna Ministry, a home for orphans situated in Jakkur. The Trust nurtures around 25 children. The trust is run by Mr Shivaji and his wife. The students organised various activities for the children and prizes were awarded to the winners of the events.

## Seshadripuram Independent Pre-University College
Mysuru

### Vigilance Day – A Corruption Free Nation



On 24 Oct. 2019, S.I.P.U.C., Mysuru observed the Vigilance Day for a Corruption Free Nation. The programme was graced by Sri Muralidhar D.G.M., B.E.M.L. in his address to the students, he spoke about making India corruption free. The other guests were - Sri T. P. Nikhil, Senior Manager B.E.M.L., Sri Sudhir, Assistant Manager, B.E.M.L., Sri Gururaj B. M., Assistant Manager B.E.M.L. As a part of this observation, an elocution competition was conducted for the students on, "Public Participation in Promoting Integrity and Eradicating Corruption to Build a Corruption Free Nation".

## Seshadripuram School
Yelahanka

### Report on, "Sahityamanthana"



On 24 and 25 of Oct. 2019, Seshadripuram School organised "Sahityamanthana" a literary fest to encourage students' understanding and love for literature, improve written and spoken expression and to inculcate the habit of participating in different activities.

"Be at war with your vices, at peace with your neighbours, and let every new year find you a better man." - Benjamin Franklin

## Children's Day Celebration



On 14th Nov. 2019, the school celebrated Children's Day as a part of which all the teaching and non teaching staff organised a food carnival. The Carnival was organised to develop a taste for traditional foods of India and also inculcate in children the habit of eating traditional food.

## Workshop on, “Incorporating values in curriculum teaching”



On 4 and 5 Nov. 2019, the school organised a workshop for its teaching fraternity on, “Incorporating Values in Curriculum Teaching” in an informal way. The resourse scholars were Dr Vijaya Kumari, Dr Sameera Simha, Dr Ganesh Bhatta, Dr Aravind Jatti and Dr Aralu Mallige Parthasarathy.

# Seshadripuram Public School

Yelahanka

## Robotics Workshop



On 6 Sept. 2019, S.P.S. organised Robotics workshop for students. Students had a hands on experience with assembling and analysing the gadgets in the workshop.

## Workshop on, “Creative Learners Need Creative Teachers”



On 12 Oct. 2019, the school organised a workshop for teachers on the topic, “Creative Learners need Creative Teachers” and “Mind Mapping”. The Resource person for the workshop was, Ms Kalpana Mohan, Renowned Academic Consultant and Trainer.

## Annual Sports Meet - 2019



On 22nd Nov 2019, Seshadripuram Public School held its Annual Sports Meet - 2019 at Hoysala Ground, Yelahanka. The Chief guest on this occasion was Mr Noel Anthony Wilson, Former International Football Player.

# Seshadripuram Evening Degree College

Seshadripuram

## State Level Faculty Development Program



On 26 Oct. 2019, S.E.D.C conducted a State Level Faculty Development Programme on “Research Methodology: Identification of Problem and Review of Literature”. Prof. Yashavantha Dongre, Former Professor of Commerce, Mysore University, an Eminent Personality in the field of research emphasised in his key note address that, 'the problem well identified itself covers half of the research'. The Resource Person of the State Level F.D.P. was Dr Paramashivaiah, Professor, Dept. of Studies & Research in Commerce and Finance Officer, Tumakuru University, Tumskuru.

# Seshadripuram Commerce College

Magadi Road, Bengaluru

## Report on, One-Day Workshop



On 26th Sept. 2019, S.C.C. organised One-Day Workshop on, "Swami Vivekananda's - Motivational Thoughts and Personality Development". Poojya Mathaji Vivekamayi of Sri Bhavatarini Ashrama and Poojya Swami Abhayanandaji Maharaj of Ramakrishna Vivekananda Vedanta Ashram were the chief guests and Dr Wooday P Krishna, Hon. Gen. Secretary, S.E.T. presided over the function. In the first session, Poojya Mathaji Vivekamayi addressed on "Swami Vivekananda Awakener of the Soul". She enlightened the students by referring to great personalities who were inspired by Swami Vivekananda and thus advised the students to follow in the footsteps of Vivekananda. In the second session, Abhayanandaji Maharaj addressed the audience on the topic, "Message to the Youth". He stressed on the power of youth and the vital place of youngsters in the realm of nation-building. After each session the topic was followed by students' speeches, where they spoke about the importance and relevance of Vivekanada's message for today's generation, which was followed by an interactive session.

## Intercollegiate Judo Competition



On 24 Oct. 2019, S.C.C. organised an Inter-collegiate Judo Competition for Men and Women. Sri Prathap N., Associate Official of Judo and Sri Chidanand S. M., Associate Official of Judo were the Chief guests and Praveen Kumar, State Olympic Medal Awardee presided over the function. The competition began with a demo and it was followed by two sessions. The first session was the Men's session and the second session was the Women's session.

“ಕಚ್ಚಾ ಲೇಖಕರಿಗೂ, ಕಚ್ಚಾ ಕವಿಗಳಿಗೂ, ಅಶುದ್ಧ ಬರಹಗಳಿಗೂ ಆಸ್ಪದ ಕೊಟ್ಟಿರುವೆ. ಕರ್ನಾಟಕದ ಸಕಲಭಾಗಗಳಲ್ಲಿಯೂ ಲೇಖಕರು ಕವಿಗಳೂ ಹುಟ್ಟಬೇಕೆಂಬುದೇ ನನ್ನ ಉದ್ದೇಶ.” – ಆಲೂರು ವೆಂಕಟರಾಯರು



# ಕನ್ನಡ ರಾಜ್ಯೋತ್ಸವ

## ಶೇಷಾದ್ರಿಪುರಂ ಆಂಗ್ಲ ಪ್ರೌಢಶಾಲೆ

ಕುಮಾರ ಪಾರ್ಕ್



ಶೇಷಾದ್ರಿಪುರಂ ಆಂಗ್ಲ ಪ್ರೌಢಶಾಲೆಯಲ್ಲಿ 64ನೇ ಕನ್ನಡ ರಾಜ್ಯೋತ್ಸವವನ್ನು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳ ಜೊತೆಗೆ 'ಕನ್ನಡದ ಜ್ಞಾನಾಧಿಪತಿ' ಎಂಬ ರಸಪ್ರಶ್ನೆ ಕಾರ್ಯಕ್ರಮ ಆಯೋಜಿಸುವುದರ ಮೂಲಕ ಆಚರಿಸಲಾಯಿತು.

## ಶೇಷಾದ್ರಿಪುರಂ ಪ್ರೌಢಶಾಲೆ

ಯಲಹಂಕ



2 ನವೆಂಬರ್ 2019ರಂದು ಯಲಹಂಕ ಪ್ರೌಢಶಾಲೆಯಲ್ಲಿ ಕನ್ನಡ ರಾಜ್ಯೋತ್ಸವವನ್ನು ವೈಭವದಿಂದ ಆಚರಿಸಲಾಯಿತು. ವಿದ್ಯಾರ್ಥಿಗಳು ಪ್ರಾರ್ಥನೆ, ನೃತ್ಯ, ಭಾಷಣಗಳ ಮೂಲಕ ಕಾರ್ಯಕ್ರಮವನ್ನು ಅರ್ಥಪೂರ್ಣಗೊಳಿಸಿದರು.

## ಶೇಷಾದ್ರಿಪುರಂ ಸಂಜೆ ಪದವಿ ಪೂರ್ವ ಕಾಲೇಜು

ಶೇಷಾದ್ರಿಪುರಂ



ಶೇಷಾದ್ರಿಪುರಂ ಸಂಜೆ ಪದವಿ ಪೂರ್ವ ಕಾಲೇಜಿನ ರಾಜ್ಯೋತ್ಸವ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಡಾ|| ಗೀತಾ ರಾಮಾನುಜಂ ಆಗಮಿಸಿ, ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿದರು. ಇದು ರಾಜ್ಯದ ಉತ್ಸವ ನಾವು ಕನ್ನಡದ ನೆಲ- ಜಲ ಸಂಸ್ಕೃತಿಗೆ ಆದ್ಯತೆ ಕೊಡಬೇಕು. ಕನ್ನಡವನ್ನು ಗದ್ಯವಾಗಿ ಸಾಹಿತ್ಯಿಕವಾಗಿ, ಜಾನಪದ ಸಾಹಿತ್ಯದ ಮೂಲಕ ಮುಟ್ಟಿಸೋಣ. ನಮ್ಮ ಸಾಹಿತ್ಯಕ್ಕೆ ಭಾಷೆಯೇ ಮೂಲ ದ್ರವ್ಯ ಎಂದು ತಿಳಿಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ಸಂಸ್ಥೆಯ ಗೌರವ ಪ್ರಧಾನ ಕಾರ್ಯದರ್ಶಿ ಡಾ. ವೂಡೇ. ಪಿ. ಕೃಷ್ಣ ವಹಿಸಿದ್ದು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡುತ್ತಾ, ಕನ್ನಡಾಭಿಮಾನ ಬೆಳೆಸಿಕೊಳ್ಳಿ, ಕುವೆಂಪು ಸ್ಮರಣೆ ಸ್ತುತ್ಯಾರ್ಹ. ಮೌಲ್ಯಾಧಾರಿತ ಬದುಕು ಮುಖ್ಯ. ಕನ್ನಡ ಮನಸ್ಸುಗಳನ್ನು ಒಗ್ಗೂಡಿಸಿ, 'ಸರ್ವರಿಗೂ ಸಮಪಾಲು ಸಮಬಾಳು' – ತತ್ವ ಅಳವಡಿಸಿಕೊಳ್ಳಿ ಎಂದು ವಿದ್ಯಾರ್ಥಿಗಳಿಗೆ ತಿಳುವಳಿಕೆ ಮೂಡಿಸಿದರು. ವೇದಿಕೆಯಲ್ಲಿ ಗೌರವ ಸಹಾಯಕ ಕಾರ್ಯದರ್ಶಿ ಎಮ್. ಎಸ್. ನಟರಾಜ್, ಧರ್ಮದರ್ಶಿಗಳಾದ ಕೃಷ್ಣಸ್ವಾಮಿ, ಡಬ್ಲ್ಯೂ. ಡಿ. ಅಶೋಕ್, ಪ್ರಾಂಶುಪಾಲರಾದ ಪ್ರೊ. ಎನ್. ಎಸ್. ಸತೀಶ್, ಪ್ರೊ. ಆರ್. ಮಹಾಲಕ್ಷ್ಮೀ ಉಪಸ್ಥಿತರಿದ್ದರು.

## ಶೇಷಾದ್ರಿಪುರಂ ಪದವಿಪೂರ್ವ ಕಾಲೇಜು

ಶೇಷಾದ್ರಿಪುರಂ



ಶೇಷಾದ್ರಿಪುರಂ ಪದವಿಪೂರ್ವ ಕಾಲೇಜಿನಲ್ಲಿ ಆಯೋಜಿಸಿದ್ದ ರಾಜ್ಯೋತ್ಸವ ಸಮಾರಂಭವನ್ನು ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಪ್ರಧಾನ ಕಾರ್ಯದರ್ಶಿಗಳೂ, ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಅಧ್ಯಕ್ಷರಾದ ಡಾ. ವೂಡೇ ಪಿ. ಕೃಷ್ಣ ಉದ್ಘಾಟಿಸಿ ಮಾತನಾಡುತ್ತಾ ನಮ್ಮ ಕನ್ನಡ ನಾಡು ಪವಿತ್ರ ಭೂಮಿ ನಮ್ಮಲ್ಲಿ ಕಲೆ, ಸಾಹಿತ್ಯ, ಸಂಸ್ಕೃತಿ ಸಂಪದ್ಭರಿತವಾಗಿದೆ. ಈ ನಾಡಿನ ಸಾಂಸ್ಕೃತಿಕ ಮಹತ್ವವನ್ನು, ಈ ನಾಡು ಕಟ್ಟಿದ ಮಹನೀಯರ ಸ್ಮರಣೆ ಮತ್ತು ಕನ್ನಡವನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯುವ ಬಗ್ಗೆ ಇಂದಿನ ಯುವ ಸಮೂಹದಲ್ಲಿ ಜಾಗೃತಿ ಮೂಡಿಸಬೇಕಿದೆ ಎಂದರು.

ಮುಖ್ಯ ಅತಿಥಿಗಳಾಗಿ ಖ್ಯಾತ ವಿಚಾರವಾದಿ ಡಾ. ಹುಲಿಕಲ್ ನಟರಾಜ್ , ಕರ್ನಾಟಕ ಬಾಲವಿಕಾಸ ಅಕಾಡೆಮಿಯ ಅಧ್ಯಕ್ಷರು ಮತ್ತು ಖ್ಯಾತ ಗಾಯಕರಾದ ಡಾ.ಕಿಕ್ಕೇರಿ ಕೃಷ್ಣಮೂರ್ತಿಯವರು, ರಂಗಭೂಮಿ ನಿರ್ದೇಶಕಿ ನಿರ್ಮಲನಾದನ್ ಭಾಗವಹಿಸಿದ್ದರು. ಡಾ. ಹುಲಿಕಲ್ ನಟರಾಜ್‌ರವರು ವೈಚಾರಿಕತೆಯನ್ನು ಬೆಳೆಸಬೇಕಾದ ಇಂದಿನ ರಾಜ್ಯ-ದೇಶದ ಶಿಕ್ಷಣ ವ್ಯವಸ್ಥೆ ಹದಗೆಟ್ಟು ಹೋಗಿದೆ, ಅದನ್ನು ಸರಿ ಮಾಡುವ ನಿಟ್ಟಿನಲ್ಲಿ ಮನಸ್ಸು ಮಾಡುತ್ತಿರುವ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಗಳು ನಾಡು ನುಡಿ ಚಿಂತನೆಯ ಜೊತೆಗೆ, ವೈಜ್ಞಾನಿಕ ಮನೋಭಾವನೆಯನ್ನು ಬೆಳೆಸುತ್ತಿರುವುದು ಒಳ್ಳೆಯ ಸಂಗತಿ ಎಂದರು. ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಆರ್. ವಿ. ಮಂಜುನಾಥರವರು ಪ್ರಾಸ್ತಾವಿಕವಾಗಿ ಮಾತನಾಡುತ್ತಾ ವೇದಿಕೆಯ ಗಣ್ಯರನ್ನು ಸ್ವಾಗತಿಸಿದರು.

## ಶೇಷಾದ್ರಿಪುರಂ ಸಂಯುಕ್ತ ಪದವಿ ಪೂರ್ವ ಕಾಲೇಜು

ಶೇಷಾದ್ರಿಪುರಂ



26 ನವೆಂಬರ್ 2019ರಂದು ಶೇಷಾದ್ರಿಪುರಂ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಸಭಾಂಗಣದಲ್ಲಿ, ಕನ್ನಡ ರಾಜ್ಯೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಕವಿ ಹಾಗೂ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ, ಬಿ.ಆರ್. ಲಕ್ಷ್ಮಣರಾವ್ ಆಗಮಿಸಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು. ವಿಶೇಷ ಆಹ್ವಾನಿತರಾಗಿ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಖ್ಯಾತ ಗಾಯಕರು, ನಟರು ಹಾಗೂ ವೀಣಾವಾದಕರಾದ ಡಾ. ಸುಚೇತನ್ ರಂಗಸ್ವಾಮಿಯವರು ತಮ್ಮ ಹಾಡಿನ ಮೂಲಕ ಸಭಿಕರನ್ನು ರಂಜಿಸಿದರು. ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು ಹಾಗೂ ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿಗಳಾದ ಡಾ. ವೂಡೇ .ಪಿ. ಕೃಷ್ಣರವರು ಅಧ್ಯಕ್ಷತೆ ವಹಿಸಿ ಕನ್ನಡ ಭಾಷೆ ಆಡುಭಾಷೆಯಾದಾಗಲೇ ಕನ್ನಡದ ಬೆಳವಣಿಗೆ ಸಾಧ್ಯವೆಂಬುದನ್ನು ಸೂಚಿಸಿದರು. ಪ್ರಾಂಶುಪಾಲರಾದ ಪ್ರೊ. ಜಿ.ಕೆ. ಮಂಜುನಾಥರವರು ಉಪಸ್ಥಿತರಿದ್ದು, ಕನ್ನಡದ ಅರಿವನ್ನು ಮೂಡಿಸಿದರು. ಇದೇ ಸಂದರ್ಭದಲ್ಲಿ ಕನ್ನಡ ವಿಷಯದಲ್ಲಿ ಅತಿ ಹೆಚ್ಚು ಅಂಕವನ್ನು ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಅಭಿನಂದಿಸಲಾಯಿತು.

"All of us every single year, we're a different person. I don't think we're the same person all our lives." - Steven Spielberg

# ಕನ್ನಡ ರಾಜ್ಯೋತ್ಸವ



## ಶೇಷಾದ್ರಿಪುರಂ ಸ್ವತಂತ್ರ ಪದವಿ ಪೂರ್ವ ಕಾಲೇಜು
ಕೆಂಗೇರಿ ಉಪನಗರ



ನವೆಂಬರ್ 8, 2019ರಂದು ಕೆಂಗೇರಿ ಉಪನಗರದ ಶೇಷಾದ್ರಿಪುರಂ ಸ್ವತಂತ್ರ ಪದವಿ ಪೂರ್ವ ಕಾಲೇಜಿನಲ್ಲಿ ಆಚರಿಸಲಾದ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಜಾನಪದ ವಿದ್ವಾಂಸ ಡಾ. ಮೀರಾಸಾಬಿಹಳ್ಳಿ ಶಿವಣ್ಣ ಆಗಮಿಸಿ, ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಹೋರಾಡಿದ ಮತ್ತು ಕನ್ನಡ ನಾಡನ್ನು ಒಗ್ಗೂಡಿಸಿದ ಮಹಾನುಭಾವರನ್ನು ನೆನಪಿಸಿಕೊಂಡರು. ಕನ್ನಡ ಭಾಷೆಯ ಸಂಸ್ಕಾರ–ಸಂಸ್ಕೃತಿ–ನೆಲ–ಜಲದ ಹಿರಿಮೆಯ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು. ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಖಜಾಂಚಿಗಳಾದ ಬಿ.ಎಂ.ಪಾರ್ಥಸಾರಥಿರವರು, ತಾವು ಕಾರ್ಯನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಆಡಳಿತ ಸ್ಥಳದಲ್ಲಿ ಬೇರೆ ಭಾಷೆಗಳ ಬಳಕೆ ಇದ್ದುದನ್ನು ಹೇಳಿ, ಇಂದು ಕನ್ನಡ ಭಾಷೆ ಎಲ್ಲಾ ರಂಗದಲ್ಲಿಯೂ ಕಾರ್ಯರೂಪದಲ್ಲಿದೆ ಎಂದು ಹೇಳಿದರು. ಈ ಕಾರ್ಯಕ್ರಮಕ್ಕೆ ವಿಶೇಷ ಅತಿಥಿಗಳಾಗಿ ಕಾಲೇಜಿನ ಕಾರ್ಯಕಾರಿ ಸಮಿತಿಯ ಅಧ್ಯಕ್ಷರಾದ ಬಿ. ಎ. ಅನಂತ್‌ರಾಮ್ ಆಗಮಿಸಿದ್ದರು. ಕಾಲೇಜಿನ ಪ್ರಾಂಶುಪಾಲ ಡಾ. ಆರ್. ಮಂಜುನಾಥ್ ಉಪಸ್ಥಿತರಿದ್ದರು.

## ಶೇಷಾದ್ರಿಪುರಂ ಸ್ವತಂತ್ರ ಪದವಿಪೂರ್ವ ಮತ್ತು ಪದವಿ ಕಾಲೇಜು
ಮೈಸೂರು



ನವೆಂಬರ್ 29, 2019ರಂದು ಶೇಷಾದ್ರಿಪುರಂ ಸ್ವತಂತ್ರ ಪದವಿಪೂರ್ವ ಮತ್ತು ಪದವಿ ಕಾಲೇಜಿಗೆ ಮುಖ್ಯ ಅತಿಥಿಗಳಾಗಿ ಡಾ. ಜಯಲಕ್ಷ್ಮೀ ಸೀತಾಪುರ, ಜಾನಪದ ವಿದ್ವಾಂಸರು ಹಾಗೂ ವಿಶ್ರಾಂತ ಕನ್ನಡ ಪ್ರಾಧ್ಯಾಪಕರು ಆಗಮಿಸಿ ಮಾತನಾಡುತ್ತಾ ಆಡುಭಾಷೆಯ ಗತ್ತು, ಮಹತ್ವ ಹಾಗೂ ಜಾನಪದ ಸೊಗಡನ್ನು ಜಾನಪದ ಗೀತೆಗಳ ಮೂಲಕ ತಿಳಿಸಿಕೊಟ್ಟರು.

ಕಾರ್ಯಕ್ರಮಕ್ಕೆ ಗೌರವಾನ್ವಿತ ಅತಿಥಿಗಳಾಗಿ ಪ್ರವಾಚಕರು ಮತ್ತು ಗೊಮ್ಮಟವಾಣಿ ಪತ್ರಿಕೆಯ ಸಂಪಾದಕರು, ಎಸ್ ಎನ್ ಅಶೋಕ್ ಕುಮಾರ್ ಆಗಮಿಸಿ, ಕನ್ನಡ ಭಾಷೆಯ ಇತಿಹಾಸ ಮತ್ತು ಭಾರತದಲ್ಲಿ ಕನ್ನಡ ಭಾಷೆಯ ಮಹತ್ವ ಹಾಗೂ ಸ್ಥಾನಮಾನಗಳ ಬಗ್ಗೆ ಅರಿವು ಮೂಡಿಸಿದರು. ಈ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಅವಿರತ ಸೇವೆ ಸಲ್ಲಿಸಿದ ಹಲವು ಶಾಲಾ ಕಾಲೇಜುಗಳ ಮುಖ್ಯಸ್ಥರನ್ನು ಸನ್ಮಾನಿಸಲಾಯಿತು. ಗೌರವಾನ್ವಿತ ಅತಿಥಿಗಳಾಗಿ ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಧರ್ಮದರ್ಶಿ ಕೆ ಕೃಷ್ಣಸ್ವಾಮಿ ಉಪಸ್ಥಿತರಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಸಹಾಯಕ ಕಾರ್ಯದರ್ಶಿ ಎಂ ಎಸ್ ನಟರಾಜ್ ವಹಿಸಿದ್ದರು, ಕಾಲೇಜು ಆಡಳಿತ ಮಂಡಳಿಯ ಅಧ್ಯಕ್ಷ ಬಿ. ಎ. ಅನಂತರಾಮು, ಶೇಷಾದ್ರಿಪುರಂ ಪದವಿ ಕಾಲೇಜಿನ ಪ್ರಾಂಶುಪಾಲರಾದ ಪ್ರೋ. ಸೌಮ್ಯ ಈರಪ್ಪ ಕೆ, ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಅರ್ಚನಾ ಸ್ವಾಮಿ ಎನ್., ಉಪಸ್ಥಿತರಿದ್ದರು.

## ಶೇಷಾದ್ರಿಪುರಂ ಪದವಿಪೂರ್ವ ಕಾಲೇಜು
ತುಮಕೂರು



ತುಮಕೂರಿನ ಶೇಷಾದ್ರಿಪುರಂ ಪದವಿಪೂರ್ವ ಕಾಲೇಜಿನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಎಂಪ್ರೆಸ್ ಕಾಲೇಜಿನ ಪ್ರಾಂಶುಪಾಲ ಕೆ.ಎಸ್. ಸಿದ್ಧಲಿಂಗಪ್ಪ ಅವರು ಕರ್ನಾಟಕದ ಏಕೀಕರಣ ನಮ್ಮ ನಾಡಿನ ಇತಿಹಾಸದಲ್ಲಿ ಒಂದು ಅತ್ಯಂತ ಪ್ರಮುಖವಾದ ಘಟ್ಟ. ಭಾಷಾವಾರು ಪ್ರಾಂತ್ಯಗಳ ಆಧಾರದಲ್ಲಿ ನಮ್ಮ ರಾಜ್ಯವು ಮೈಸೂರು ರಾಜ್ಯವಾಗಿ ರೂಪುಗೊಳ್ಳುವ ಮತ್ತು ಕರ್ನಾಟಕ ಎಂದು ಮರುನಾಮಕರಣಗೊಳ್ಳುವ ಮೊದಲು ಕನ್ನಡ ಭಾಷೆಗಿದ್ದ ಸ್ಥಾನಮಾನವನ್ನು ಈಗಿನ ಪರಿಸ್ಥಿತಿಯೊಂದಿಗೆ ಹೋಲಿಸಿದರೆ ಕನ್ನಡ ಭಾಷೆಯ ಸ್ಥಾನಮಾನದಲ್ಲಿ ಗಣನೀಯ ಕುಸಿತವಾಗಿರುವುದು ವೇದ್ಯವಾಗುತ್ತದೆ ಎಂದು ಬೇಸರ ವ್ಯಕ್ತಪಡಿಸಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ನಿವೃತ್ತ ಪ್ರಾಂಶುಪಾಲ ಬಿ. ಮರುಳಯ್ಯ ಮಾತನಾಡಿ ಕನ್ನಡ ಭಾಷೆಗೆ ಸುಮಾರು 2500 ವರ್ಷಗಳಿಗೂ ಹೆಚ್ಚಿನ ಇತಿಹಾಸವಿದ್ದು ವಿಶ್ವದ ಪ್ರಾಚೀನ ಭಾಷೆಗಳಲ್ಲೊಂದಾಗಿದೆ. ಅತೀ ಹೆಚ್ಚು ಜ್ಞಾನಪೀಠ ಪ್ರಶಸ್ತಿಗಳನ್ನುಗಳಿಸಿರುವ ಹೆಮ್ಮೆ ನಮ್ಮ ಕನ್ನಡ ಭಾಷೆಗಿದೆ ಎಂದರು. ಅಧ್ಯಕ್ಷತೆಯನ್ನು ವಹಿಸಿದ್ದ ಪ್ರಾಂಶುಪಾಲ ಪ್ರೊ. ಬಸವರಾಜು ಬಿ.ವಿ. ಮಾತನಾಡಿ ಇಂದಿನ ಯುವಜನಾಂಗ ಕನ್ನಡನಾಡು–ನುಡಿಯ ಬಗ್ಗೆ ತಾತ್ಸಾರವನ್ನು ಬೆಳೆಸಿಕೊಳ್ಳಬಾರದು ಎಂದು ಕಿವಿಮಾತು ಹೇಳಿದರು. ಶೇಷಾದ್ರಿಪುರಂ ಪದವಿ ಕಾಲೇಜಿನ ಪ್ರಾಂಶುಪಾಲ ಪ್ರೊ. ಜಗದೀಶ ಜಿ.ಟಿ., ಹಾಜರಿದ್ದರು.

## ಶೇಷಾದ್ರಿಪುರಂ ಪದವಿ ಕಾಲೇಜು
ಮೈಸೂರು



ನವೆಂಬರ್ 27, 2019ರಂದು ಮೈಸೂರಿನ ಶೇಷಾದ್ರಿಪುರಂ ಪದವಿ ಕಾಲೇಜಿನಲ್ಲಿ ಕನ್ನಡ ರಾಜ್ಯೋತ್ಸವದ ಅಂಗವಾಗಿ ಮೈಸೂರು, ಮಂಡ್ಯ ಹಾಗೂ ಕೊಡಗು ಜಿಲ್ಲೆಗಳನ್ನೊಳಗೊಂಡಂತೆ ಅಂತರ– ಪದವಿಪೂರ್ವ ಕಾಲೇಜಗಳ ಕನ್ನಡ ರಸಪ್ರಶ್ನೆ ಸ್ಪರ್ಧೆ ಹಾಗೂ ಕನ್ನಡ ಜನಪದ ಸಮೂಹ ಗಾಯನ ಸ್ಪರ್ಧೆಗಳನ್ನು ನಡೆಸಲಾಯಿತು.

ಈ ಕಾರ್ಯಕ್ರಮಕ್ಕೆ ಮೂರು ಜಿಲ್ಲೆಗಳಿಂದ ಒಟ್ಟು 32 ಪದವಿ ಪೂರ್ವ ಕಾಲೇಜುಗಳು ಭಾಗವಹಿಸಿದ್ದವು.

ಜನಪದ ಸಮೂಹ ಗಾಯನ ಸ್ಪರ್ಧೆಯ ತೀರ್ಪುಗಾರರಾಗಿ ಜನಪದ ಕಲಾವಿದರು ಮತ್ತು ಮೂಡಲ ಮಲೆ – ಜಾನಪದ ಕಲಾತಂಡದ ಸಂಸ್ಥಾಪಕರಾದ ಕೆ.ಎಂ. ಸಿದ್ದಪ್ಪ, ಮತ್ತು ಸಹ–ತೀರ್ಪುಗಾರರಾಗಿ ಶೇಷಾದ್ರಿಪುರಂ ಸ್ವತಂತ್ರ ಪದವಿ ಪೂರ್ವ ಕಾಲೇಜಿನ ಕನ್ನಡ ಉಪನ್ಯಾಸಕರು ಹಾಗೂ ಹವ್ಯಾಸಿ ಗಾಯಕರಾದ ಧನಂಜಯ ಹೆಚ್.ಆರ್. ಆಗಮಿಸಿದ್ದರು.

"ರಾಷ್ಟ್ರೀಯತ್ವಕ್ಕೆ ಒಂದೇ ಜಾತಿ ಅಥವಾ ಜನಾಂಗವಿರಬೇಕೆಂಬ ಅವಶ್ಯಕತೆಯೂ ಇಲ್ಲ, ಒಂದೇ ಭಾಷೆಯಿರಬೇಕೆಂಬುದೂ ಹೇಳಲಾಗುವುದಿಲ್ಲ;
ಒಂದೇ ಧರ್ಮವೂ ಬೇಕೇಬೇಕಂತಲ್ಲ; ಒಂದೇ ದೇಶವೂ ಕೂಡ ಇಲ್ಲದಿದ್ದರೂ ಸಾಗಬಹುದು." – ಆಲೂರು ವೆಂಕಟರಾಯರು

## Seshadripuram Law College

Seshadripuram

### Guest Lecture




On 26 Sep. 2019, S.L.C. organised a Guest Lecture on, "Swami Vivekananda Neethi Meemamse" . Prof. Muralidhara H. N., Academic Director, Swami Vivekananda Research Foundation and Retired Professor, A.P.S. College of Arts and Commerce was the Resource Person on this occasion.

### Special Lecture



On 24 Sep. 2019, S.L.C. organised a special lecture on "Soft Skills, Billing and Tax Related Software, Placement and Internship" by GLISTEN Project Solution Pvt. Ltd. The Resource persons on this occasion were Mr. Santhosh ,C.A., Mr. Subramaniyam, Ms. Soujanya , Coordinators, Ms. Navya, Bio-Chemist and Mr. Vishwas, Graduate of Harvard University.

## Seshadripuram Independent Pre-University College

Kengeri

### Annual Sports Meet 2019-20




On 19 Oct. 2019,S.I.P.U.C., Kengeri organised its College Annual Sports Meet 2019-20 at Bangalore University Stadium. The Chief guest on this occasion was Dr Shivanna N. K., Retired Army Officer, National Kabaddi Player, Coach and International Referee, Asian Games and Pro Kabaddi.

### S.E.T. P.U. Throw Ball Tournament

On 6 Nov. 2019, the college organised an Inter- S.E.T P. U. Institutions Throw ball Tournament. Sri Subramanya N. S. , Technical Committee Member, Asian Throw ball Federation was the Chief guest on this occasion.

## Seshadripuram College

Seshadripuram

### Inter-Collegiate Best Physique Men Competition



On 30 Sep. 2019, Seshadrpuram College hosted the Inter-Collegiate Best Physique Men Competition organised by the Department of Physical Education and Sports, Bengaluru Central University. Mr. Bengaluru Central University 2019-20 was also awarded on this occasion.

## Seshadripuram P. U. College

Seshadripuram

### Annual Athletic Meet 2019



On 14 Nov. 2019 S.P.U.C. (Main) held its Annual Athletic Meet 2019. The Chief guest on this occasion was Sri K. Krishna Swamy, Trustee, S.E.T.

## ಶೇಷಾದ್ರಿಪುರಂ ಅಕಾಡೆಮಿ ಆಫ್ ಬಿಸಿನೆಸ್ ಸ್ಟಡೀಸ್

ಕೆಂಗೇರಿ ಉಪನಗರ

### "ಐರಾ" 2019



ಐಕ್ಯುಎಸಿ ಮತ್ತು ಸೃಷ್ಠಿ ಸಾಂಸ್ಕೃತಿಕ ಸಂಘದ ವತಿಯಿಂದ ಕಾಲೇಜಿನಲ್ಲಿ ನಡೆದ "ಐರಾ" 2019 ಕಾರ್ಯಕ್ರಮವು ಹಲವಾರು ಪಿ.ಯು.ಸಿ ವಿದ್ಯಾರ್ಥಿಗಳ ಪ್ರತಿಭಾನ್ವೇಷಣೆಗೆ ಅವಕಾಶ ಒದಗಿಸಿಕೊಟ್ಟಿತು. ನಗರದ ಬೇರೆ-ಬೇರೆ ಕಾಲೇಜುಗಳಿಂದ ಸುಮಾರು 50ಕ್ಕೂ ಅಧಿಕ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿದರು. ಕಾರ್ಯಕ್ರಮಕ್ಕೆ ಆಗಮಿಸಿದ್ದ ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಖಜಾಂಚಿ ಬಿ.ಎಂ.ಪಾರ್ಥಸಾರಥಿಯವರು ಓದಿನೊಂದಿಗೆ ಇಂತಹ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸಬೇಕು, ಇಂತಹ ಅವಕಾಶಗಳನ್ನು ನಮ್ಮ ಕಾಲೇಜಿನಲ್ಲಿ ಸದಾ ಕಲ್ಪಿಸಿಕೊಡುತ್ತೇವೆ. ಈ ಅವಕಾಶವನ್ನು ಯುವಜನತೆ ಸದುಪಯೋಗ ಪಡಿಸಿಕೊಳ್ಳಬೇಕು. ಕಾಲೇಜಿನ ಪ್ರಾಂಶುಪಾಲರು ಜಯರಾಮ್ ಮಾತನಾಡಿ ವಿದ್ಯಾರ್ಥಿಗಳು ಮೊಬೈಲ್ ಬಳಕೆ ಮಾಡುವುದು ರಾಕ್ಷಸರನ್ನು ಜೊತೆಯಲ್ಲಿ ಇರಿಸಿಕೊಂಡಂತೆ ಎಂದು ವಿದ್ಯಾರ್ಥಿಗಳಿಗೆ ಹಿತ ನುಡಿದರು.ಕಾರ್ಯಕ್ರಮದ ಸಂಚಾಲಕ ಚೇತನ ಎಂ.ಆರ್ ಹಾಗೂ ಉಪನ್ಯಾಸಕ ವರ್ಗದವರು, ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

"Let our New Year's resolution be this: we will be there for one another as fellow members of humanity, in the finest sense of the word." - Goran Persson

## ಶೇಷಾದ್ರಿಪುರಂ ಸಂಯುಕ್ತ ಪದವಿಪೂರ್ವ ಕಾಲೇಜು

ಶೇಷಾದ್ರಿಪುರಂ

### ವಾರ್ಷಿಕ ಕ್ರೀಡಾಕೂಟ



05 ಡಿಸೆಂಬರ್ 2019ರಂದು ಶೇಷಾದ್ರಿಪುರಂ ಸಂಯುಕ್ತ ಪದವಿ ಪೂರ್ವ ಕಾಲೇಜಿನ "ವಾರ್ಷಿಕ ಕ್ರೀಡಾಕೂಟ" ಮಲ್ಲೇಶ್ವರಂ ಆಟದ ಮೈದಾನದಲ್ಲಿ ನಡೆಯಿತು. ಉದ್ಘಾಟನೆಯನ್ನು ಶೇಷಾದ್ರಿಪುರಂ ಪದವಿ ಕಾಲೇಜಿನ ಪ್ರಾಂಶುಪಾಲರಾದ ಡಾ॥ ಅನುರಾಧಾ ರಾಯ್ ನೆರವೇರಿಸಿದರು. ಮುಖ್ಯ ಆತಿಥಿಗಳಾಗಿ ಆಗಮಿಸಿದ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಧರ್ಮದರ್ಶಿಗಳು ಡಬ್ಲ್ಯೂ .ಡಿ. ಅಶೋಕ್ ಕ್ರೀಡೆಯ ಮಹತ್ವವನ್ನು ತಿಳಿಸುವುದರೊಂದಿಗೆ ಮಕ್ಕಳಲ್ಲಿ ಕ್ರೀಡಾಭಿಮಾನ ಹೆಚ್ಚುವಂತೆ ಮಾಡಿದರು. ಪ್ರಾಂಶುಪಾಲರು ಪ್ರೊ॥ ಜಿ. ಕೆ. ಮಂಜುನಾಥ ಉಪಸ್ಥಿತರಿದ್ದು, ತಮ್ಮ ಅಧ್ಯಕ್ಷೀಯ ನುಡಿಯೊಂದಿಗೆ ಮಕ್ಕಳಿಗೆ ಕ್ರೀಡೆಯ ಮಹತ್ವವನ್ನು ತಿಳಿಸಿದರು.

## ಶೇಷಾದ್ರಿಪುರಂ ಪದವಿಪೂರ್ವ ಕಾಲೇಜು

ಶೇಷಾದ್ರಿಪುರಂ

### ಗಾಂಧಿ ಜಯಂತಿ



ಅಕ್ಟೋಬರ್ 2ರಂದು ಕಾಲೇಜಿನಲ್ಲಿ ಗಾಂಧಿ ಜಯಂತಿಯನ್ನು ಆಚರಿಸಲಾಯಿತು. ಗಾಂಧೀ ಜಯಂತಿಯ ಪ್ರಯುಕ್ತ ಪೋಷಕರ ಸಭೆಯನ್ನು ನಡೆಸಲಾಯಿತು. ಈ ಸಂದರ್ಭದಲ್ಲಿ ಪ್ರಾಂಶುಪಾಲರು ಪೋಷಕರನ್ನು ಉದ್ದೇಶಿಸಿ ಮಾತನಾಡಿದರು.

## ಶೇಷಾದ್ರಿಪುರಂ ಸ್ತ್ರೀ ಸಮಾಜ ಮಾಧ್ಯಮಿಕ ಶಾಲೆ

ಶೇಷಾದ್ರಿಪುರಂ

### ಗಾಂಧೀಜಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರೀಜಿ ಜಯಂತಿ




ಶೇಷಾದ್ರಿಪುರಂ ಸ್ತ್ರೀ ಸಮಾಜ ಮಾಧ್ಯಮಿಕ ಶಾಲೆಯು ಅಕ್ಟೋಬರ್ 02, 2019ರಂದು 150ನೇ ಗಾಂಧೀ ಜಯಂತಿ ಮತ್ತು 115ನೇ ಲಾಲ್ ಬಹದ್ದೂರ್ ಶಾಸ್ತ್ರೀ ಅವರ ಜನ್ಮದಿನಾಚರಣೆಯನ್ನು ಹಮ್ಮಿಕೊಂಡಿತ್ತು.

ಈ ಪ್ರಯುಕ್ತ ಶಾಲೆಯಿಂದ ಆನಂದರಾವ್ ವೃತ್ತದ ವರೆಗೆ ಸದ್ಭಾವನ ನಡಿಗೆಯನ್ನು ಹಮ್ಮಿಕೊಂಡು, ಅಲ್ಲಿರುವ ಗಾಂಧೀ ಪ್ರತಿಮೆಗೆ ನೂಲಿನ ಮಾಲಾರ್ಪಣೆ ಮಾಡಿ ಸರ್ವಧರ್ಮ ಗೀತೆಗಳನ್ನು ಹಾಡಲಾಯಿತು. ನಂತರ ಶಾಲೆಯಲ್ಲಿ ಈ ಮಹಾನ್ ಚೇತನಗಳ ಅದ್ವಿತೀಯ ಕಾರ್ಯಗಳನ್ನು ಸ್ಮರಿಸಿ, ಭಜನೆಯನ್ನು ಹಾಡಲಾಯಿತು. ಅಂದು ಸ್ವಚ್ಛತಾ ಕಾರ್ಯಕ್ರಮವನ್ನು ಹಮ್ಮಿಕೊಂಡು ಶಾಲಾ ಮೈದಾನವನ್ನು ಸ್ವಚ್ಛಗೊಳಿಸಲಾಯಿತು.

## ಶೇಷಾದ್ರಿಪುರಂ ಪದವಿಪೂರ್ವ ಕಾಲೇಜು

ತುಮಕೂರು

### ಉಪನ್ಯಾಸ ಕಾರ್ಯಕ್ರಮ



ಸ್ವಾಮಿ ವಿವೇಕಾನಂದ ಅಧ್ಯಯನ ಕೇಂದ್ರದ ವತಿಯಿಂದ ಏರ್ಪಡಿಸಿದ್ದ ಉಪನ್ಯಾಸದಲ್ಲಿ ವಿದ್ವಾನ್ ಬಾಲಚಂದ್ರ ಎಂ ಮಾತನಾಡಿ, ವ್ಯಕ್ತಿಯ ಜೀವನ ವಿಕಸನಗೊಳ್ಳುವುದು ಅವರ ವ್ಯಕ್ತಿತ್ವದಿಂದಲೇ ಹೊರತು ಅಂಕಪಟ್ಟಿಯಿಂದಲ್ಲ. ಹಾಗಾಗಿ ಜೀವನದಲ್ಲಿ ಮನುಷ್ಯನ ವ್ಯಕ್ತಿತ್ವ ಮುಖ್ಯ ಎಂದು ಸಲಹೆ ನೀಡಿದರು. ಉಪನ್ಯಾಸದಲ್ಲಿ ಪ್ರಾಂಶುಪಾಲ ಪ್ರೊ. ಬಸವರಾಜು ಬಿ.ವಿ. ಅಧ್ಯಕ್ಷತೆ ವಹಿಸಿದ್ದರು. ಸ್ವಾಮಿ ವಿವೇಕಾನಂದ ಅಧ್ಯಯನ ಕೇಂದ್ರದ ಸಂಚಾಲಕ ಶಶಿಕುಮಾರ ವೈ. ಬಿ. ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

## ಶೇಷಾದ್ರಿಪುರಂ ಅಕಾಡೆಮಿ ಆಫ್ ಬಿಸಿನೆಸ್ ಸ್ಟಡೀಸ್

ಕೆಂಗೇರಿ

### ಸ್ತನಕ್ಯಾನ್ಸರ್ ಅರಿವು ಕಾರ್ಯಕ್ರಮ

19-10-2019 ರಂದು ಸ್ತನಕ್ಯಾನ್ಸರ್ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮ ಕಾಲೇಜಿನಲ್ಲಿ ನಡೆಯಿತು. ಬಿ.ಜಿ.ಎಸ್. ಗ್ಲೋಬಲ್ ಹಾಸ್ಪಿಟಲ್‌ನ ವೈದ್ಯರಾದ ಡಾ॥ ಮಾತಂಗಿ ಪದ್ಮನಾಭನ್ ಅವರು ವಿದ್ಯಾರ್ಥಿನಿಯರಿಗೆ ಸ್ತನಕ್ಯಾನ್ಸರ್ ಬಗ್ಗೆ ಮಾಹಿತಿ ನೀಡಿದರು. ಕ್ಯಾನ್ಸರ್ ರೋಗವನ್ನು ಪ್ರಾರಂಭದಲ್ಲೇ ಗುರುತಿಸಿದರೆ ರೋಗ ಹರಡುವುದನ್ನು ತಪ್ಪಿಸಬಹುದು ಹಾಗೂ ಅದರಿಂದ ಗುಣಮುಖರಾಗಬಹುದು. ಸ್ತನಕ್ಯಾನ್ಸರ್ ಮುಖ್ಯವಾಗಿ ನಮ್ಮ ದಿನಚರಿಯ ಕೆಲವು ಚಟುವಟಿಕೆಗಳು ಸರಿಯಾಗಿ ನಡೆಯದೇ ಇದ್ದಾಗ ಬರುವ ಸಾಧ್ಯತೆ ಇದೆ.

ವಿದ್ಯಾರ್ಥಿನಿಯರಿಗೆ ಬಹಳ ಸರಳವಾಗಿ ಕೆಲವು ನಿದರ್ಶನಗಳೊಂದಿಗೆ ಉಪಯುಕ್ತವಾದ ಮಾಹಿತಿಯನ್ನು ಡಾಕ್ಟರ್ ತಿಳಿಸಿಕೊಟ್ಟರು. ಮತ್ತೊಬ್ಬ ಡಾಕ್ಟರ್ ಕಮಲ್ದೀಪ್ ಅವರು ಈ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಕಮಲ್ದೀಪ್ ಮತ್ತು ಅವರ ತಂಡ ವಿದ್ಯಾರ್ಥಿನಿಯರೊಂದಿಗೆ ಕೆಂಗೇರಿ ಉಪನಗರದ ಮುಖ್ಯರಸ್ತೆಯಲ್ಲಿ ಜಾಥಾವನ್ನು ನಡೆಸಿ ನಾಗರಿಕರಿಗೆ ಸ್ತನಕ್ಯಾನ್ಸರ್ ಬಗ್ಗೆ ಜಾಗೃತಿ ಮೂಡಿಸಿದರು. ಕಾಲೇಜಿನ ಮಹಿಳಾ ಸಬಲೀಕರಣ ಸಮಿತಿ, ಎನ್‌ಸಿಸಿ, ಎನ್‌ಎಸ್‌ಎಸ್ ಹಾಗೂ ಅಸ್ಮಿತೆಯ ಸಹಯೋಗದೊಂದಿಗೆ ಈ ಕಾರ್ಯಕ್ರಮ ನಡೆಯಿತು. ಪ್ರಾಂಶುಪಾಲರು ಪ್ರೊಫೆಸರ್ ಜಯರಾಮ ಕಾರ್ಯಕ್ರಮ ಹಾಗೂ ಜಾಥಾಕ್ಕೆ ಚಾಲನೆ ನೀಡಿದರು. ಕಾಲೇಜಿನ ಎಲ್ಲ ಮಹಿಳಾ ಉಪನ್ಯಾಸಕರು ಹಾಗೂ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

### ಕ್ಯಾನ್ಸರ್ ತಡೆಗಟ್ಟುವ ಕೌಶಲ್ಯ ತರಬೇತಿ



ಅಕ್ಟೋಬರ್ 30ರಂದು ಬೆಂಗಳೂರು ವಿಶ್ವವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ ಮತ್ತು ಯೆನೆಪೋಯ ವಿಶ್ವವಿದ್ಯಾಲಯ ಹಾಗೂ ಶೇಷಾದ್ರಿಪುರಂ ಅಕಾಡೆಮಿ ಆಪ್ ಬಿಸಿನೆಸ್ ಸ್ಟಡೀಸ್, ಕೆಂಗೇರಿ ಉಪನಗರ, ಇವರ ಸಹಭಾಗಿತ್ವದಲ್ಲಿ ಕ್ಯಾನ್ಸರ್ ತಡೆಗಟ್ಟುವ ಮತ್ತು ನಿಯಂತ್ರಿಸುವ ಕೌಶಲ್ಯ ತರಬೇತಿಯ ಒಂದು ದಿನದ ಕಾರ್ಯಾಗಾರ ನಡೆಯಿತು. ಎನ್.ಎಸ್.ಎಸ್. ಸಂಯೋಜನಾಧಿಕಾರಿಗಳಾದ ಡಾ. ಎನ್. ಸತೀಶ್ ಗೌಡ ಉದ್ಘಾಟನೆಯನ್ನು ನೆರವೇರಿಸಿದರು. ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವಾನ್ವಿತ ಸಹಾಯಕ ಕಾರ್ಯದರ್ಶಿಗಳಾದ ಎಮ್.ಎಸ್. ನಟರಾಜು ಅಧ್ಯಕ್ಷತೆಯನ್ನು ವಹಿಸಿದ್ದರು ಹಾಗೂ ಯೆನೆಪೋಯ ವಿಶ್ವವಿದ್ಯಾಲಯದ ಎನ್.ಎಸ್.ಎಸ್. ಸಂಯೋಜನಾಧಿಕಾರಿಗಳಾದ ಡಾ. ಅಶ್ವಿನಿ ಶೆಟ್ಟಿ, ಹಾಗೂ ಪ್ರಾಂಶುಪಾಲ ಪ್ರೊ.ಜಯರಾಮು ಮತ್ತು ಇನ್ನಿತರರು ಭಾಗವಹಿಸಿದ್ದರು.

"ಪೃಥ್ವಿ ದೇವತೆಗೆ ತನ್ನ ಶಕ್ತಿಯ ಅವಿರ್ಭಾವವಾಗುವುದಕ್ಕೆ ಭಾರತ ಮಾತೆಯ ಅವಶ್ಯಕತೆಯಿದ್ದಂತೆ,
ಭಾರತಮಾತೆಗೆ ಕರ್ನಾಟಕ ಮಾತೆಯ ಅವಶ್ಯಕತೆಯಿರುತ್ತದೆ." – ಆಲೂರು ವೆಂಕಟರಾಯರು

# Reports

## ಶೇಷಾದ್ರಿಪುರಂ ಕಾಮರ್ಸ್ ಕಾಲೇಜು

ಮಾಗಡಿ ರಸ್ತೆ

### ಭೀಮ ಪ್ರತಿಜ್ಞೆ ಕಾರ್ಯಕ್ರಮ



19-10-2019 ರಂದು ಮಾಗಡಿ ರಸ್ತೆಯ ಶೇಷಾದ್ರಿಪುರಂ ಕಾಮರ್ಸ್ ಕಾಲೇಜಿನಲ್ಲಿ "ಭೀಮ ಪ್ರತಿಜ್ಞೆ" ನಾಟಕ ಪ್ರದರ್ಶನ ನಡೆಯಿತು.

ಮುಖ್ಯ ಅತಿಥಿಗಳಾಗಿ ನಾಟಕ ಅಕಾಡೆಮಿ ಸದಸ್ಯರು ರಘುನಂದನ್ ಬೇಲೂರು ಆಗಮಿಸಿದ್ದರು. ಅತಿಥಿಗಳು ವಿದ್ಯಾರ್ಥಿಗಳಿಗೆ ರಂಗಭೂಮಿಯ ಮಹತ್ವವನ್ನು ತಿಳಿಸಿಕೊಡುತ್ತಾ ಇಂತಹ ರಂಗಭೂಮಿಯನ್ನು ಕಟ್ಟುವ ಕೆಲಸ ನಡೆಯುತ್ತಿರಬೇಕು ಎಂದು ಸಲಹೆ ಕೊಟ್ಟರು. ಅಧ್ಯಕ್ಷತೆಯನ್ನು ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಧರ್ಮದರ್ಶಿಗಳು ಡಬ್ಲ್ಯೂ.ಡಿ. ಅಶೋಕ್ ವಹಿಸಿದ್ದು ಅಧ್ಯಕ್ಷೀಯ ನುಡಿಗಳನ್ನು ಆಡಿದರು.

ಸಮಾರಂಭಕ್ಕೆ ಬೆಂಗಳೂರು ವಿಶ್ವವಿದ್ಯಾಲಯದ ವ್ಯಾಪ್ತಿಯೊಳಗೆ ಬರುವ ಶೇಷಾದ್ರಿಪುರಂ ಅಕಾಡೆಮಿ ಆಫ್ ಬಿಸಿನೆಸ್ ಸ್ಟಡೀಸ್, ಕೆಂಗೇರಿ, ಎ.ಐ.ಎಂ.ಎಸ್ ಕಾಲೇಜು, ಆರ್.ಪಿ.ಎ ಕಾಲೇಜು, ರಮಣಶ್ರೀ ಅಕಾಡೆಮಿ ಆಫ್ ಮ್ಯಾನೇಜ್‌ಮೆಂಟ್, ಕುವೆಂಪು ಕಾಲೇಜು ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಹಾಗೂ ಪೋಷಕರು ಆಗಮಿಸಿ ನಾಟಕದ ಯಶಸ್ಸಿಗೆ ಕಾರಣರಾದರು. ಕಾಲೇಜಿನ ಪ್ರಾಂಶುಪಾಲರು ಸುಮತಿ ಸಿ., ಸಂಚಾಲಕರು ಭಾಗ್ಯಲಕ್ಷ್ಮಿ ಪಿ., ಕನ್ನಡ ಪ್ರಾಧ್ಯಾಪಕರು, ಬೋಧಕ ಹಾಗು ಬೋಧಕೇತರ ವರ್ಗ, ವಿದ್ಯಾರ್ಥಿಗಳು ಮತ್ತಿತರರು ಉಪಸ್ಥಿತರಿದ್ದರು.

## ಶೇಷಾದ್ರಿಪುರಂ ಪದವಿ ಕಾಲೇಜು

ಮೈಸೂರು

### ಎನ್.ಎಸ್.ಎಸ್. ದಿನಾಚರಣೆ




25-09-2019ರಂದು ಮೈಸೂರಿನ ಶೇಷಾದ್ರಿಪುರಂ ಪದವಿ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನಾ ಘಟಕದ ವತಿಯಿಂದ 50ನೇ ವರ್ಷದ ಎನ್.ಎಸ್.ಎಸ್. ದಿನವನ್ನು ನಗರದ ಕುರ್ಗಳ್ಳಿಯಲ್ಲಿರುವ 'ಚಿಗುರು' ನಿರ್ಗತಿಕ, ಮಾನಸಿಕ ಅಸ್ವಸ್ಥರ ಆಶ್ರಮದಲ್ಲಿ ಆಚರಿಸಲಾಯಿತು. 'ಚಿಗುರು' ಆಶ್ರಮದ ಸಂಸ್ಥಾಪಕಿ ಸುಷ್ಮ ಮತ್ತು ಅವರ ಕುಟುಂಬ ದವರು ಉಪಸ್ಥಿತರಿದ್ದರು. ಈ ದಿನ ಆಶ್ರಮದಲ್ಲಿ ನಡೆದ ಸಭಾ ಕಾರ್ಯಕ್ರಮದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ರಾಷ್ಟ್ರೀಯ ಸೇವಾ ಯೋಜನಾ ಘಟಕದ ಸಂಯೋಜಕರಾದ ಡಾ. ಬಿ. ಚಂದ್ರಶೇಖರ್, ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿದ್ದರು. ಇವರು ಮಾತನಾಡುತ್ತಾ, ರಾಷ್ಟ್ರೀಯ ಸೇವಾ ಯೋಜನೆಯು ಕೇವಲ ದೈಹಿಕ ಶ್ರಮವನ್ನು ಒಳಗೊಂಡ ಕಾರ್ಯಕ್ರಮ ಮಾತ್ರವಲ್ಲ ಸಮಾಜದ ಶ್ರೇಯೋಭಿವೃದ್ಧಿಗಾಗಿ ನಡೆಸುವ ಕಾರ್ಯಕ್ರಮಗಳೂ ಇದರಲ್ಲಿ ಒಳಗೊಂಡಿವೆ. ಸಾರ್ವಜನಿಕ ಸೇವೆಯ ಗುರಿಯನ್ನು ಹೊಂದಿರುವ ಈ ಕಾರ್ಯಕ್ರಮ ಇದಕ್ಕೊಂದು ಉತ್ತಮ ಉದಾಹರಣೆ ಎಂದು ಶೇಷಾದ್ರಿಪುರಂ ಪದವಿ ಕಾಲೇಜಿನ ಕಾರ್ಯಕ್ರಮವನ್ನು ಶ್ಲಾಘಿಸಿದರು. 'ಚಿಗುರು' ಆಶ್ರಮದ ಸ್ಥಾಪಕರು ಸುಷ್ಮಾ ಈ ಸಂದರ್ಭದಲ್ಲಿ ಮಾತನಾಡಿದರು. ವಿದ್ಯಾರ್ಥಿಗಳು ನೃತ್ಯ ಹಾಗೂ ಸಂಗೀತದೊಂದಿಗೆ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು. ಪ್ರಾಚಾರ್ಯರು ಪ್ರೊ. ಸೌಮ್ಯ ಈರಪ್ಪ ಕೆ. ಅಧ್ಯಕ್ಷತೆ ವಹಿಸಿದ್ದರು. ಕಾಲೇಜಿನಿಂದ ಆಶ್ರಮವಾಸಿಗಳಿಗೆ ಅಗತ್ಯವಾದ ದಿನಬಳಕೆಯ ಕೆಲವು ವಸ್ತುಗಳನ್ನು ಸಂಗ್ರಹಿಸಿ ನೀಡಲಾಯಿತು. ಕಾಲೇಜಿನ ಎನ್.ಎಸ್.ಎಸ್. ಕಾರ್ಯಕ್ರಮಾಧಿಕಾರಿ ಡಾ. ರಾಘವೇಂದ್ರ ಆರ್., ಉಪ ಕಾರ್ಯಕ್ರಮಾಧಿಕಾರಿ ಮುರುಳಿ ಕಾರ್ಯಕ್ರಮ ಆಯೋಜಿಸಿದ್ದರು. ಕಾಲೇಜಿನ ಪ್ರಾಧ್ಯಾಪಕ ವೃಂದ, ಬೋಧಕೇತರ ವರ್ಗ ಉಪಸ್ಥಿತರಿದ್ದರು.

### ಜಾನಪದ ಹಾಗೂ ಲಾವಣಿ ಗೀತ ಗಾಯನ



04-10-2019ರಂದು ಜಾನಪದ ಹಾಗೂ ಲಾವಣಿ ಗೀತ ಗಾಯನ ಕಾರ್ಯಕ್ರಮವು ಕಾಲೇಜು ಸಭಾಂಗಣದಲ್ಲಿ ನಡೆಯಿತು.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಜನಪದ ಕಲಾವಿದರು, ಖ್ಯಾತ ಗಾಯಕರು ಕಡಬಗೆರೆ ಮುನಿರಾಜು ಆಗಮಿಸಿದ್ದರು. ಇವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತ ಇಂದಿನ ಪೀಳಿಗೆಯ ಯುವ ಜನಾಂಗಕ್ಕೆ ಜಾನಪದ ಸಂಸ್ಕೃತಿಯನ್ನು ತಿಳಿಸಿಕೊಟ್ಟು, ಜಾನಪದ ಹಾಗೂ ಲಾವಣಿಯ ಮಹತ್ವದ ಅರಿವನ್ನು ಮೂಡಿಸಿ, ಜನಪದ ಗೀತೆಗಳು, ಲಾವಣಿಗಳು ಹಾಗೂ ಮಂಟೇಸ್ವಾಮಿ ಕಾವ್ಯಗಳನ್ನು ಹಾಡುತ್ತಾ ವಿದ್ಯಾರ್ಥಿಗಳನ್ನು ರಂಜಿಸಿದರು. ಪ್ರಾಂಶುಪಾಲರು ಸುಮತಿ.ಸಿ, ಬೋಧಕ ಹಾಗೂ ಬೋಧಕೇತರ ವರ್ಗ ಉಪಸ್ಥಿತರಿದ್ದರು.

### ಗಾಂಧಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿ ಆಚರಣೆ



02.10.2019ರಂದು, ಶೇಷಾದ್ರಿಪುರಂ ಸ್ವತಂತ್ರ ಪದವಿ ಪೂರ್ವ ಮತ್ತು ಪದವಿ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನಾ ಘಟಕ, ಗಾಂಧೀ ಅಧ್ಯಯನ ಕೇಂದ್ರ ಹಾಗೂ ಯುನೈಟೆಡ್ ವೇ (ಎನ್.ಜಿ.ಓ.) ಸಹಯೋಗದಲ್ಲಿ ರಾಷ್ಟ್ರಪಿತಾ ಮಹಾತ್ಮ ಗಾಂಧೀಜಿಯವರ 150ನೇ ಜನ್ಮದಿನ ಹಾಗೂ ಶ್ರೀ. ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಜನ್ಮದಿನವನ್ನು ಸ್ವಚ್ಛತಾ ಅಭಿಯಾನ ನಡೆಸುವ ಮೂಲಕ ಆಚರಿಸಿದರು.

ಕಾಲೇಜಿನ ಸಭಾಂಗಣದಲ್ಲಿ ಮಹಾತ್ಮ ಗಾಂಧೀಜಿ ಮತ್ತು ಶ್ರೀ. ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಚಿತ್ರಪಟಗಳಿಗೆ ಪುಷ್ಪಾರ್ಚನೆಯ ಮೂಲಕ ಗೌರವವನ್ನು ಸಲ್ಲಿಸಿ, ಸುಮಾರು 100 ವಿದ್ಯಾರ್ಥಿಗಳು ಹಾಗೂ 70 ಬೋಧಕ, ಬೋಧಕೇತರರು ಅಭಿಯಾನದಲ್ಲಿ ಭಾಗವಹಿಸಿದರು. ಸುಮಾರು 80 ಚೀಲ ಭರ್ತಿ ಪ್ಲಾಸ್ಟಿಕ್‌ಗಳನ್ನು ಆಯ್ದು ಆ ಪ್ರದೇಶವನ್ನು ಪ್ಲಾಸ್ಟಿಕ್‌ಮುಕ್ತ ವಲಯವನ್ನಾಗಿ ಮಾಡಲಾಯಿತು. ಇವರೊಂದಿಗೆ ಯುನೈಟೆಡ್ ವೇ (ಎನ್.ಜಿ.ಓ.) ಹಾಗೂ ಹಸಿರು ದಳ ತಂಡದ ಸದಸ್ಯರು ಭಾಗವಹಿಸಿದರು.

"Your success and happiness lies in you. Resolve to keep happy, and your joy and you shall form an invincible host against difficulties." - Helen Keller

## ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜು

ಶೇಷಾದ್ರಿಪುರಂ

### ಕವನ ಸಂಕಲನ ಲೋಕಾರ್ಪಣೆ



ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜಿನಲ್ಲಿ ಕನ್ನಡ ಸಾಹಿತ್ಯ ವೇದಿಕೆ ವತಿಯಿಂದ ಸುಪ್ರಸಿದ್ಧ ಕವಿಗಳಾದ ಸತ್ಯಮಂಗಲ ಮಹಾದೇವ ಅವರ 'ಪಂಚವರ್ಣದ ಹಂಸ' ಕವನ ಸಂಕಲನವನ್ನು ಲೋಕಾರ್ಪಣೆ ಮಾಡಲಾಯಿತು.

ಡಾ. ಮಲ್ಲೇಪುರಂ ಜಿ. ವೆಂಕಟೇಶ್ ವಿಶ್ರಾಂತ ಕುಲಪತಿಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅವರು ಕೃತಿಯನ್ನು ಲೋಕಾರ್ಪಣೆ ಮಾಡಿ ಮಾತನಾಡುತ್ತ ಸಂಜೆ ಕಾಲೇಜಿಗೆ ಉತ್ತಮ ಇತಿಹಾಸವಿದೆ, ವಿದ್ಯಾರ್ಥಿಗಳ ಶೈಕ್ಷಣಿಕ ಉನ್ನತಿ ಜೊತೆಗೆ ಸಾಹಿತ್ಯದ ವಿವಿಧ ಪ್ರಾಕಾರಗಳಲ್ಲಿ ಅಭಿವೃದ್ಧಿಯನ್ನು ವ್ಯಕ್ತಪಡಿಸುವಂತಹ ಕೃತಿ ಲೋಕಾರ್ಪಣೆ ಕೆಲಸವನ್ನು ಶೇಷಾದ್ರಿಪುರಂ ಕಾಲೇಜು ಮಾಡುತ್ತಿದೆ. ಕನ್ನಡ ಸಾಹಿತ್ಯ ವೇದಿಕೆಗೆ ಗೌರವ ಪ್ರಧಾನ ಕಾರ್ಯದರ್ಶಿಗಳು ಪ್ರೋತ್ಸಾಹ ನೀಡುತ್ತಿದ್ದಾರೆ ಎಂದರು. ಕೃತಿಯು ಕಾವ್ಯ ಭಾಷೆಯನ್ನು ಕಟ್ಟುವಲ್ಲಿ ಧ್ಯಾನಸ್ಥ ಸ್ಥಿತಿ ಇರುವುದನ್ನು ತಿಳಿಸುತ್ತದೆ. ಇವರ ಕಾವ್ಯದ ಹಿಂದೆ ವಚನಕಾರರಿದ್ದಾರೆ, ವೈಚಾರಿಕ ಸಂವಾದಗಳಿಗೆ ಪೂರಕವಾಗಿ ತೆರೆದುಕೊಡಿದೆ. ಕಾವ್ಯ ಗುಚ್ಛದಲ್ಲಿ ಕಾವ್ಯ ಕೌಶಲ್ಯ ಎದ್ದು ಕಾಣುತ್ತದೆ ಎಂದರು.

'ಪಂಚವರ್ಣದ ಹಂಸ' ಕೃತಿಯನ್ನು ಕುರಿತು ಖ್ಯಾತ ವಿಮರ್ಶಕರು ಡಾ. ಸಿ. ಎನ್. ರಾಮಚಂದ್ರನ್ ಮಾತನಾಡಿದರು. ಹಂಸ-ಪರಮಹಂಸ-ಪ್ರಜ್ಞಾಸ್ಥರ-ಯೋಗಶಾಸ್ತ್ರದ ಪರಿಕಲ್ಪನೆಗಳ ಬಗ್ಗೆ ಸವಿಸ್ತಾರವಾಗಿ ತಿಳಿಸುತ್ತಾ ಹಂಸ ನಮ್ಮ ಸಂಸ್ಕೃತಿಯ ಭಾಗವಾಗಿ ಅನೇಕ ಧ್ವನಿಗಳನ್ನು ಹೊಂದಿದೆ, ಕವನಗಳು ಯೋಗಸ್ಥರದಲ್ಲಿ ಎತ್ತರದ ಪರಿಕಲ್ಪನೆ, ಅನೇಕ ಬಗೆಯ ಆಶಯಗಳನ್ನು ಹೊಂದಿವೆ. ಕೆಲವು ಕವನಗಳು ವ್ಯವಸ್ಥೆಗಳ ವಿಡಂಬನೆಯ ಸ್ಥಿತಿಯನ್ನು ಬಿಂಬಿಸುತ್ತವೆ ಎಂದು ತಿಳಿಸುತ್ತಾ, ಕನ್ನಡ, ಕನ್ನಡಿಗ ಆಧುನಿಕತೆಯಲ್ಲಿ ಇನ್ನೂ ಉನ್ನತ ಸ್ಥಾನ ಪಡೆಯಬೇಕು ಎಂಬ ಆಶಯವನ್ನು ವ್ಯಕ್ತಪಡಿಸಿದರು.

ನಂತರ ಮಾತನಾಡಿದ ಕೃತಿಯ ಲೇಖಕರು 'ನಾನು ಬಿದಿರು ಕೊಳವೆ ಮಾತ್ರ. ನಿಮ್ಮೆಲ್ಲರ ಸ್ವರವನ್ನು ನಾನು ಬಿಂಬಿಸುತ್ತೇನೆ' ಎಂದರು.

ಸಮಾರಂಭದ ಅಧ್ಯಕ್ಷತೆಯನ್ನು ಡಾ. ವೂಡೇ ಪಿ. ಕೃಷ್ಣರವರು ವಹಿಸಿ ಮಾತನಾಡಿ, ಅರಳುವ ಪ್ರತಿಭೆಗಳಿಗೆ, ನಾಡಿನ ವಿದ್ವಾಂಸರಿಗೆ ಅವಕಾಶ ಮಾಡಿಕೊಡುವುದು ಸಂಸ್ಥೆಯ ಉದ್ದೇಶ ಎಂದರು. ವೇದಿಕೆಯಲ್ಲಿ ಅತಿಥಿಗಳೊಂದಿಗೆ ಸಂಸ್ಥೆಯ ಡಬ್ಲ್ಯೂ. ಡಿ. ಅಶೋಕ್ ಧರ್ಮದರ್ಶಿ, ಪ್ರೊ ಎನ್.ಎಸ್. ಸತೀಶ್ ಪ್ರಾಂಶುಪಾಲರು, ಉಪಸ್ಥಿತರಿದ್ದರು.

## ಶೇಷಾದ್ರಿಪುರಂ ಪದವಿ ಕಾಲೇಜು,

ಮೈಸೂರು

### ಅಂತರರಾಷ್ಟ್ರೀಯ ಮಾನವ ಹಕ್ಕು ದಿನಾಚರಣೆ



10.12.2019ರಂದು ಮೈಸೂರಿನ ಶೇಷಾದ್ರಿಪುರಂ ಪದವಿ ಕಾಲೇಜು ಮತ್ತು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ವಕೀಲರ ಸಂಘ, ಮೈಸೂರು ಇವರ ಸಹಯೋಗದಲ್ಲಿ ಅಂತರರಾಷ್ಟ್ರೀಯ ಮಾನವ ಹಕ್ಕು ದಿನಾಚರಣೆಯನ್ನು ಆಚರಿಸಲಾಯಿತು.

ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷರು, ಸುರೇಶ್ ಕೃಷ್ಣಪ್ಪ ವೊಂಟಿಗೋಡಿ, ಅತಿಥಿಗಳಾಗಿ ಆಗಮಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಮುಖ್ಯ ಅತಿಥಿಗಳಾಗಿ ಬಿ.ಪಿ.ದೇವಮಾನೆ, ಗೌರವ ಹಿರಿಯ ನಾಗರಿಕ ನ್ಯಾಯಾಧೀಶರು ಹಾಗೂ ಸದಸ್ಯರು ಮತ್ತು ಕಾರ್ಯದರ್ಶಿಗಳು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಮೈಸೂರು, ಸಿ.ಬಿ.ರಿಷ್ಯಂತ್, ಮೈಸೂರು ಜಿಲ್ಲಾ ಪೋಲೀಸ್ ಅಧೀಕ್ಷಕರು, ಸಂಪನ್ಮೂಲ ವ್ಯಕ್ತಿಗಳಾಗಿ ಎಂ. ಎ. ಹೇಮಲತಾ, ಹಿರಿಯ ವಕೀಲರು, ಎ.ಐ.ಡಬ್ಲ್ಯೂ.ಸಿ. ದಕ್ಷಿಣವಲಯ ಸಂಘಟಕರು, ಮೈಸೂರು ಆಗಮಿಸಿದ್ದರು.

## ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು

ಯಲಹಂಕ

### 'ಯುವ ಸೌರಭ'



04-10-2019 ರಂದು ಶೇಷಾದ್ರುಪುರಂ ಪ್ರಥಮ ದರ್ಜೆ ಕಾಲೇಜಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಹಂಸಜ್ಯೋತಿ ಕಲಾಸಂಘದ ಸಹಯೋಗದಲ್ಲಿ ಕಾಲೇಜಿನ ಕನ್ನಡ ವಿಭಾಗದ ವತಿಯಿಂದ ವಿವಿಧ ಬಗೆಯ ಕಲಾಪ್ರಕಾರಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುವ ಸಲುವಾಗಿ 'ಯುವ ಸೌರಭ' ಕಾರ್ಯಕ್ರಮ ನಡೆಯಿತು.

ಸಂಸ್ಥೆಯ ಗೌರವ ಪ್ರಧಾನ ಕಾರ್ಯದರ್ಶಿಗಳಾದ ಡಾ. ವೂಡೆ ಪಿ. ಕೃಷ್ಣ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ, ಕಲಾಪ್ರಕಾರಗಳ ಮಹತ್ವವನ್ನು ಕುರಿತು ಮಾತನಾಡಿದರು. ಅಧ್ಯಕ್ಷರು ಶ್ರೀ ಎನ್.ಆರ್. ಪಂಡಿತಾರಾಧ್ಯರು ಪಠ್ಯದ ಹೊರತಾಗಿಯೂ ಕಲಾ ಪ್ರಕಾರಗಳು ಬಹುಮುಖ್ಯ. ಇವುಗಳನ್ನು ಉಳಿಸಿ, ಬೆಳೆಸಿ, ಮುಂದಿನ ಪೀಳಿಗೆಗೆ ತಲುಪಿಸುವ ಜವಾಬ್ದಾರಿ ನಮ್ಮದಾಗಿದೆ. ವಿದ್ಯಾರ್ಥಿಗಳು ಇವುಗಳತ್ತ ಗಮನಹರಿಸಬೇಕು ಎಂದರು. ಕಾಲೇಜಿನ ಪ್ರಾಂಶುಪಾಲರು ಉಪಸ್ಥಿತರಿದ್ದರು.

ಬೃ.ಬೆಂ.ಮ.ನ. ಪಾಲಿಕೆ ಸದಸ್ಯ ಎಂ. ಸತೀಶ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕಿ ಬಿ. ನೀಲಮ್ಮ, ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಗೀತಾ ಡಿ.ಸಿ. ಉಪಸ್ಥಿತರಿದ್ದರು.

ಕರ್ನಾಟಕ ಶಾಸ್ತ್ರೀಯ ವಾದ್ಯ ಸಂಗೀತ, ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, ಸುಗಮ ಸಂಗೀತ, ಜನಪದ ಗೀತೆಗಳು, ಸಮೂಹ ನೃತ್ಯಗಳನ್ನು ಪ್ರಸ್ತುತಪಡಿಸಲಾಯಿತು. ವಿವಿಧ ಜನಪದ ಕಲಾತಂಡಗಳು ವೀರಗಾಸೆ, ಡೊಳ್ಳು ಕುಣಿತಗಳನ್ನು ಪ್ರದರ್ಶಿಸಿದವು. ಜೊತೆಗೆ ಕಥಾ ಕೀರ್ತನೆ, ಕಿರುನಾಟಕಗಳ ಪ್ರದರ್ಶನವೂ ಇತ್ತು.

ಕಾರ್ಯಕ್ರಮದಲ್ಲಿ ವಿಭಾಗದ ಅಧ್ಯಾಪಕರು, ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

### ಗಾಂಧೀಜಿ ಅವರ ಚಿಂತನೆಗಳ ಪ್ರಸ್ತುತತೆ



02 ಅಕ್ಟೋಬರ್ 2019 ರಂದು ಗಾಂಧೀಜಿಯವರ 150ನೇ ವರ್ಷಾಚರಣೆಯ ಪ್ರಯುಕ್ತ ಒಂದು ದಿನದ ಕಾರ್ಯಾಗಾರವನ್ನು ಕಾಲೇಜಿನ ಗಾಂಧಿ ಅಧ್ಯಯನ ಕೇಂದ್ರ ಹಾಗೂ ಎನ್ಎಸ್ಎಸ್ ಘಟಕವು, ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಸಹಯೋಗದಲ್ಲಿ ಹಮ್ಮಿಕೊಂಡಿತ್ತು. ಮುಖ್ಯ ಅತಿಥಿಯಾಗಿ ಕಲಾವಿದರೂ, ಲಲಿತ ಕಲಾ ಅಕಾಡೆಮಿಯ ನಿಕಟಪೂರ್ವ ಅಧ್ಯಕ್ಷರೂ ಆದ ಡಾ. ಎಂ.ಎಸ್. ಮೂರ್ತಿ ಆಗಮಿಸಿ ಮಾತನಾಡಿದರು.

ಇದೇ ಸಂದರ್ಭದಲ್ಲಿ ವಿವಿಧ ವೃತ್ತಿಗಳಲ್ಲಿ (ನೇಕಾರರು, ಹೂವಾಡಿಗರು, ಸೈನಿಕರು, ರೈತರು, ಪೌರಕಾರ್ಮಿಕರು) ಸೇವೆ ಸಲ್ಲಿಸಿ, ವೃತ್ತಿಯ ಘನತೆಯನ್ನು ಕಾಯ್ದುಕೊಂಡಿರುವ ಐವರು ಗಣ್ಯರನ್ನು ಸನ್ಮಾನಿಸಲಾಯಿತು. ಇದರೊಂದಿಗೆ ಎನ್.ಎಸ್.ಎಸ್. ಘಟಕದ ವತಿಯಿಂದ ಶ್ರಮದಾನವನ್ನು ಆಯೋಜಿಸಲಾಗಿತ್ತು.

## ಶೇಷಾದ್ರಿಪುರಂ ಪಿ.ಯು.ಕಾಲೇಜು

ಯಲಹಂಕ

### ಎನ್.ಎಸ್.ಎಸ್. ವಾರ್ಷಿಕ ವಿಶೇಷ ಶಿಬಿರ

ಎನ್.ಎಸ್.ಎಸ್. ಸುವರ್ಣ ಮಹೋತ್ಸವದ ಅಂಗವಾಗಿ ವಾರ್ಷಿಕ 'ರಾಷ್ಟ್ರೀಯ ಸೇವಾ ಯೋಜನಾ' ವಿಶೇಷ ಶಿಬಿರ-2019ನ್ನು ಚಿಕ್ಕಜಾಲದ ಬೈಯನಹಳ್ಳಿಯಲ್ಲಿ 30.09.2019 ರಿಂದ 04.10.2019ರ ವರೆಗೆ ನಡೆಸಲಾಯಿತು. ಪದವಿ ಪೂರ್ವ ಶಿಕ್ಷಣ ಇಲಾಖೆಯ ರಾಜ್ಯ ಎನ್.ಎಸ್.ಎಸ್. ಸಂಯೋಜನಾಧಿಕಾರಿಯಾದ ಗಾಯಿತ್ರಿ ರೆಡ್ಡಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

ಉಚಿತ ಸಾಮಾನ್ಯ ಆರೋಗ್ಯ ಮತ್ತು ಸ್ತನ ಕ್ಯಾನ್ಸರ್ ತಪಾಸಣೆ ಕಾರ್ಯಕ್ರಮವನ್ನು 03.10.2019 ರಂದು ನಡೆಸಲಾಯಿತು. ಇಂಡಿಯನ್ ಕ್ಯಾನ್ಸರ್ ಸೊಸೈಟಿಯ ಡಾ|| ಟಿ. ಚೇತನ್ ಎಂ.ಡಿ., ಮತ್ತು ಡಾ|| ಸುನೀತ್ ಶೆಟ್ಟಿ ಎಂ.ಡಿ.ಎಸ್. ಮುಖ್ಯ ಅತಿಥಿಗಳಾಗಿ ಆಗಮಿಸಿ ವಿದ್ಯಾರ್ಥಿಗಳಿಗೂ ಮತ್ತು ಗ್ರಾಮದ ನಾಗರಿಕರಿಗೆ ಉಚಿತ ಆರೋಗ್ಯ ತಪಾಸಣೆ ಮಾಡಿದರು. ಎನ್.ಎಸ್.ಎಸ್. ವಿದ್ಯಾರ್ಥಿಗಳು 'ಶುಚಿತ್ವ' ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಿದರು.

"ಭರತ ಖಂಡವಿಲ್ಲದೆ ಕರ್ನಾಟಕ ಮುಂತಾದ ಪ್ರಾಂತಗಳು ಇಲ್ಲವೆಂಬುದು ಎಷ್ಟು ನಿಜವೋ ಅಷ್ಟೇ, ಕರ್ನಾಟಕ ಮುಂತಾದ ಪ್ರಾಂತಗಳಿಲ್ಲದೆ ಭರತಖಂಡವಿಲ್ಲವೆಂಬುದೂ ನಿಜವು." – ಆಲೂರು ವೆಂಕಟರಾಯರು

## Workshop on, "Injuries and Crime Scene Investigation"



On 31 Oct. 2019, Seshadripuram Law College had organised a Workshop on "Injuries and Crime scene Investigation". The Resource Person for the workshop was Dr Dinesh Rao, Forensic Pathologist, who has 20 years of Medico Legal Work Experience in various countries like Scotland, Jamaica and is also closely associated with the work pattern of Europe, America, Caribbean and Canada. His policies and recommendations has changed the face of the Medico Legal System in Jamaica, assisted in containing crime and has conducted around 12000 autopsies and 6000 indirectly supervised cases. At present he is consulted globally on all Death Investigation besides the teaching medical students, Forensic Science students, Lawyers and Police Department.

The first technical session was on "Injuries". He diligently spoke on different kinds of Injuries such as an abrasion, contusion, lacerations, incised wound, chop wounds, defence wounds, self-inflicted wounds and fabricated wounds. He also focused on the importance of the post-mortem report which has a pivotal role in nailing a culprit and threw light on the apathy of police personnel in not knowing the sensitivity of the crime scene investigation which has a major significance in the evidence factor but due to blunders committed by personnel and not being sensitised many high profile cases couldn't get justice.

The second technical session was on, "Gun shot wounds" which was meticulously explained and eruditely put forward by Dr Dinesh Rao by focusing on the meaning of fire arm, gunshot wounds and wounds from rifled weapons.

Both sessions were followed by extensive discussions by referring to cases which were phenomenal and advantageous. Needless to say it was a session that garnered loud cheers and accolades from the participants, which inspired many who were in attendance.



## Rastriya Ekta Divas

On 30 Oct. 2019, S.L.C. celebrated Sardar Vallabhai Patel's birth anniversary by hosting "Vigilance Awareness Week". The Central Vigilance Commission observes the Vigilance Awareness Week every year, on the 31st October. An awareness programme about the ill effects of corruption and how the integrity of the nation is put to stake by corrupt practices was conducted. The session was presided over by three distinguished authorities in the field of vigilance - Mr S.S. Gurjar, Vigilance Officer; Sri Krishnamurthy, Deputy Manager, Vigilance Department and Mr Shanmugan, Officer of United India Insurance Co Ltd. All of them spoke about the importance of national integration, unity and solidarity and created awareness to our students about corruption and how we must be vigilant to stop such activities. Students participated in an essay writing competition on the topic "Eradicate Corruption- Build a New India" on the same day.



## One-Day National Level Symposium on, "Digital Banking – A New Milestone in the Banking System of India"

On 17 Oct. 2019, Seshadripuram Institute of Management Studies organised a One-Day National Level Symposium on "Digital Banking" in association with Bangalore Management Association at S.I.M.S. campus in Yelahanka. The Chief guest for the symposium was Sri R. Gandhi, Former Deputy Governor of Reserve Bank of India who spoke on the developments of Digital Banking system in the country across verticals and gave a bespoke picture to the audience on the evolution of banking system in the country which went from 'Brick & Mortar' to 'Click & Order' model in the last two decades. He stressed on the pros and cons of technology developing rapidly in the banking domain and how streamlining this technology in the industry can extract maximum benefits to all the stakeholders alike. Other dignitaries on the stage were Sri Srinivas Murthy, Managing Committee Member, B.M.A. He addressed the gathering on the relevance of BMA to management institutions and management professionals in the region. The inauguration was followed by plenary sessions having prominent members from the banking industry as panellists who deliberated on the issues and challenges in the implementation of digital banking system across different sections of the society. The plenary sessions were followed by a technical session where participants presented research papers on the sub-themes of the conference.



"ಕರ್ನಾಟಕ, ಮಹಾರಾಷ್ಟ್ರ, ಆಂಧ್ರ, ತಮಿಳು, ಬಂಗಾಲ ಮುಂತಾದ ಪ್ರಾಂತಗಳು ಭಿನ್ನ ಭಿನ್ನ ಜೀವಿಗಳೆಂದು ತಿಳಿಯಲು ಅಡ್ಡಿಯಿಲ್ಲ. ಪರಮಾತ್ಮನು ಭಿನ್ನ ಭಿನ್ನ ಜೀವಿಗಳಲ್ಲಿ ಅಂತರ್ಯಾಮಿ ರೂಪದಿಂದ ಇದ್ದಂತೆ, ಭಾರತಮಾತೆಯು ಈ ಭಿನ್ನ ಭಿನ್ನ ಪ್ರಾಂತಗಳಲ್ಲಿ ಅಂತರ್ಯಾಮಿಯಾಗಿದ್ದಾಳೆ." – ಆಲೂರು ವೆಂಕಟರಾಯರು